ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.: 387/2017

ಪಿ. ಡಬ್ಲ್ಯು: 04
ಸಿ. ಡಬ್ಲ್ಯು: 05

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಮಲತಾ |
| ತಂದೆ/ಪತಿಯ ಹೆಸರು | : | ಜಯರಾಂ |
| ವಯಸ್ಸು | : | 27 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಕೊಡಿಯಾಲ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 29.03.2023
ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ರವರು ನನ್ನ ಗಂಡ. ಚಾಸಾ.2 ಗೊತ್ತು. ಆರೋಪಿಯನ್ನು ನಾನು ನೋಡಿಲ್ಲ. ನನಗೆ ಫೋನ್ ಮಾಡಿ ಚಾಸಾ.2 ರವರು ನನ್ನ ಗಂಡನಿಗೆ ಅಪಘಾತವಾಗಿದೆ ಎಂದು ಮಾರ್ಚ್ ತಿಂಗಳ 2016 ರಂದು ತಿಳಿಸಿದ್ದರು. ಅಪಘಾತ ಹೇಗೆ ಆಯಿತು ಎಂದು ನನಗೆ ಆತ ತಿಳಿಸಲಿಲ್ಲ. ನಾನು ಮಂಡ್ಯ ಜಿಲ್ಲಾಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಗಂಡನ ಬಲಕಾಲಿಗೆ ಪೆಟ್ಟಾಗಿದ್ದು ಕಂಡು ಬಂದಿತ್ತು.

ಅಪಘಾತ ಹೇಗೆ ಆಯಿತು ಎಂದು ನಾನು ನಂತರ ತಿಳಿದಿದ್ದೇನೆ. ಅಪಘಾತ ಆರೋಪಿಯ ವಾಹನದಿಂದ ಆಗಿದೆ ಎಂದು ಗೊತ್ತಾಯಿತು. ಆರೋಪಿ ಅಪಘಾತದ ಸಮಯದಲ್ಲಿ ಟಾಟಾ ಏಸ್ ವಾಹನವನ್ನು ಓಡಿಸುತ್ತಿದ್ದರು ಮತ್ತು ನನ್ನ ಗಂಡ ಹೀರೋ ಹೋಂಡಾ ಬೈಕ್ ಅನ್ನು ಓಡಿಸುತ್ತಿದ್ದರು ಎಂದು ತಿಳಿಸಿದರು.

ಅಪಘಾತವಾದ ನಂತರ ಊರಿನಲ್ಲಿ ಮುಖಂಡರು ರಾಜಿ ಮಾಡಿಕೊಳ್ಳುವ ಸಲುವಾಗಿ ಆರೋಪಿಯನ್ನು ಕರೆದಿದ್ದು ಆತ ಬಂದಿರುವುದಿಲ್ಲ. ಆರೋಪಿ ರಾಜಿಗೆ ಬಾರದ ಕಾರಣ ಆರೋಪಿಯ ವಿರುದ್ದ ನನ್ನ ಗಂಡ ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಪೋಲೀಸರಿಗೆ ನಾನು ಅಪಘಾತ ಕುರಿತು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ನನ್ನ ಗಂಡನಿಗೆ ಅಪಘಾತ ಪಡಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಗಂಡ ಅಪಘಾತದ ಸಮಯದಲ್ಲಿ ಓಡಿಸುತ್ತಿದ್ದ ಬೈಕ್ ಅನ್ನು ಹಾಗೂ

ನನ್ನ ಗಂಡನಿಗೆ ಅಪಘಾತ ಪಡಿಸಿದ ಟಾಟಾ ಏಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.3 ರಿಂದ 6 ಭಾವಚಿತ್ರಗಳಲ್ಲಿರುವ ಬೈಕ್ ಮತ್ತು ಟಾಟಾ ಏಸ್ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ಅಪಘಾತವಾದ ದಿಃ 13.04.2016 ಎಂದರೆ ಸರಿ. ನಾನು ಆ ದಿನ ಕೆಸಲಗೆರೆ ಗ್ರಾಮದಲ್ಲಿದ್ದು ನನ್ನನ್ನು ಕರೆದುಕೊಂಡು ಬರಲು ನನ್ನ ಗಂಡ ನಿಪಿ.3 ಮತ್ತು 4 ರಲ್ಲಿ ಕಾಣುವ ಬೈಕ್ ನಲ್ಲಿ ಬರುತ್ತಿದ್ದರು ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಗಂಡ ಬೈಕ್ ಅನ್ನು ನಿಧಾನವಾಗಿ ರಸ್ತೆಯ ಎಡಭಾಗದಲ್ಲಿ ಆಲಗೂಡು ಗ್ರಾಮದ ಸಿದ್ದೇಶ್ವರ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ ಬರುತ್ತಿದ್ದರು ಮತ್ತು ಆ ಸಮಯದಲ್ಲಿ ಅವರ ಎದುರುಗಡೆಯಿಂದ ಆರೋಪಿ ಟಾಟಾ ಏಸ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಗಂಡ ಓಡಿಸುತ್ತಿದ್ದ ಬೈಕ್ ಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದನು ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ</u>**

ಆರೋಪಿ ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡುಬಂದ ಕಾರಣ ರೂ.100/- ಖರ್ಚಿನೊಂದಿಗೆ ಮುಂದೂಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.